
ಕಥೆ



ಡಾ. ಪ್ರೇಮಲತ ಬಿ.

ಕಲೆ: ಮುರಳೀಧರ್ ರಾಥೋಡ್

# ತೆರವು



ರಾತೋ ರಾತ್ರಿ ಸೈಟಿನಲ್ಲಿ ಶೆಡ್ಡು ಎಬ್ಬಿಸಿದ್ದಾರೆಂದು ಕೇಳಿದ ಮೂರ್ತಿಗೆ ಅವತ್ತು ನಿದ್ದೆ ಬರಲಿಲ್ಲ.

ಊರಿಗೆ ಹೋಗಿಬರಬೇಕೆಂದರೆ ಕೆಲಸಕ್ಕೆ ರಜಾ ಹಾಕಬೇಕಿತ್ತು. ಹೋದ ಕೂಡಲೆ ಕೆಲಸ ಆಗುತ್ತದೆ ಎನ್ನುವುದು ಖಾತ್ರಿಯಿರಲಿಲ್ಲ. ಮೂರು ದಿನಗಳಾದರೂ ಬೇಕು ಎನ್ನುವುದು ಒಂದು ಅಂದಾಜಷ್ಟೆ ಆಗಿತ್ತು.

ಎಷ್ಟು ದಿನಗಳಾದರೂ ಆಗಲಿ, ಈ ಬಾರಿ ಸೈಟಿನ ಸುತ್ತ ತಂತಿ-ಬೇಲಿಯನ್ನಾದರೂ ಕಟ್ಟಿಸಬೇಕು. ಬೇರೆ ಊರಿನಲ್ಲಿ ಖಾಲಿ ಸೈಟು ಇಟ್ಟುಕೊಂಡು ಇನ್ನೊಂದು ಊರಿನಲ್ಲಿ ನೆಮ್ಮದಿಯಾಗಿ ಬದುಕುವ ಕಾಲ ಮುಗಿದುಹೋಯಿತೇನೋ? ದಿನ ಬೆಳಗಾಗುವುದರಲ್ಲಿ ಜನ ಮನೆಕಟ್ಟಿಕೊಂಡು ಬಿಡುತ್ತಾರೆ. ಮನೆ ಕಟ್ಟಿಸಿ ಬಾಡಿಗೆ ಕೊಟ್ಟರೆ, ತಮ್ಮದೇ ಮನೆ ಎನ್ನುವವರೂ ಈ ಕಾಲದಲ್ಲಿ ಕಡಿಮೆಯಿಲ್ಲ. ಇಂತಹ ಅದೆಷ್ಟು ವ್ಯಾಜ್ಯಗಳು ಕೋರ್ಟು ಕಟ್ಟೆ ಹತ್ತಿಲ್ಲ? ಇಂತಹ ವಿಚಾರಗಳನ್ನು ಪೇಪರುಗಳಲ್ಲಿ ಓದುತ್ತಿದ್ದರೂ, ಅವರಿವರು ಹೇಳುತ್ತಿದ್ದರೂ, ತನಗೆ ಮಾತ್ರ ಹಾಗಾಗುವುದಿಲ್ಲ ಎನ್ನುವ ಯಾವುದೋ ಹುಂಬ ಧೈರ್ಯದಿಂದ ಇಪ್ಪತ್ತು ವರ್ಷಗಳಿಂದ ಹಾಗೇ ಬಿಟ್ಟುಕೊಂಡು ಬಂದಿದ್ದಾಗಿದೆ. ಆದರೆ, ಈಗಲಾದರೂ ತಾನು ಎಚ್ಚೆತ್ತುಕೊಳ್ಳಬೇಕು ಎಂದುಕೊಳ್ಳುತ್ತ ಮೂರ್ತಿ ಆತಂಕಗೊಂಡ.

ಕ್ಯಾಲೆಂಡರಿನ ಮುಂದೆ ಹೋಗಿ ನಿಂತ. ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವ ಸೋಮವಾರ ಇರುವುದು ಕಂಡಿತು. ಶುಕ್ರವಾರ ಕೆಲಸ ಮುಗಿಸಿ ಹೋದರೆ ಸೋಮವಾರದವರೆಗೆ ರಜಾ. ಅಕ್ಕನ ಮನೆಯಲ್ಲಿ ಒಂದೆರಡು ದಿನ ಇದ್ದು ಬಂದಂತೆಯೂ ಆಗುತ್ತದೆ ಅಂದುಕೊಂಡ. ಗೀತಾಳನ್ನೂ ಜೊತೆಗೆ ಕರೆದೊಯ್ಯಬೇಕು. ಇಂತಹ ಆತಂಕದ ಸಮಯದಲ್ಲಿ ಅವಳು ಬಂಡೆಯ ತರಹ ತಣ್ಣಗಿದ್ದು